ಬಂದಿದೆ' ಎಂದರು. ನನ್ನ ಎದೆ ಧಸಕ್ಕೆಂದು ಎಕ್ಕದ ಹೂವಿನ ಭವಿಷ್ಯ ನೆನಪಿಗೆ ಬಂತು. ಮತ್ತೆ ಸ್ವಲ್ಪ ಸಮಯದಲ್ಲೇ ಸಹಪಾಠಿಯೊಬ್ಬ ಉಪನಯನದ ಮನೆಗೆ ಬಂದವನು, 'ನಿಮ್ ಸತ್ಯ ನಾಲ್ಕು ಸಬ್ಜೆಕ್ಟಲ್ಲಿ ಡುಮ್ಕಿ' ಎಂಬ ಉಡುಗೊರೆ ನೀಡಿದ. ಬೆಳಿಗ್ಗೆತಾನೇ ತಲೆಗೆ ಅಕ್ಷತೆ ಹಾಕಿ ಆಶೀರ್ವದಿಸಿದವರೆಲ್ಲಾ ಈಗ 'ನಾಲ್ಕು ಸಬ್ಜೆಕ್ಟ್ ಹೋಗಿದೆಯಂತೆ. ಥೂ... ದಡ್ಡಮುಂಡೇದು' ಅಂತ ಉಗುಳಿನ ತುಂತುರಿನಿಂದ ಮತ್ತೊಮ್ಮೆ ಆಶೀರ್ವದಿಸಿದರು. ದೇವರು ಈ ಸಲ ಕೈಕೊಟ್ಟಿದ್ದರ ಬಗ್ಗೆ ನಿರಾಸೆಯಾಗಿದ್ದರೂ 'ಹಾಳಾದವರು ಇನ್ನೊಂದೆರಡು ದಿನ ಬಿಟ್ಟು ರಿಸಲ್ಟ್ ಹಾಕಬಾರದಿತ್ತೆ? ನನ್ನ ಉಪನಯನಕ್ಕೆ ಜನ ಸೇರಿದ ಮುಹೂರ್ತವೇ ಆಗಬೇಕಿತ್ತೇ?' ಅಂತ ವಿಪರೀತ ಸಿಟ್ಟುಬಂತು. ಸಂಜೆ ಆರತಕ್ಷತೆ ಇತ್ತು. ಹಾಳಾದ ಫಲಿತಾಂಶ ಇಡೀ ಮನೆಯನ್ನು ಮಂಕಾಗಿಸಿತು. ಅವತ್ತು ಹೋದ ದೇವರ ಮೇಲಿನ ನಂಬಿಕೆ ಮತ್ತೆ ಮರಳಿ ಬರಲಿಲ್ಲ!

ದೇವರು ಪಾಸ್ ಮಾಡುವುದಿಲ್ಲ, ನಾನೇ ಓದಬೇಕು ಎಂದು ಮನದಟ್ಟಾದ್ದರಿಂದ ಪಾಸಾಗಿರುವ ಎರಡೂ ಸಬ್ಜೆಕ್ಟನ್ನೂ ರಿಜೆಕ್ಟ್ ಮಾಡಿ ಆರೂ ಸಬ್ಜೆಕ್ಟ್ ಕಟ್ಟುವ ಯೋಚನೆ ಮಾಡಿ ಸ್ಕೂಲಿಗೆ ಹೋದರೆ, ಪರೀಕ್ಷೆ ಕಟ್ಟಿಸಿಕೊಳ್ಳುವ ಕ್ಲರ್ಕ್ ಜಯಪ್ರಕಾಶ್ ಎಂಬುವವರು – 'ಬೇಡ ಮಗೂ, ವರ್ಷವೆಲ್ಲಾ ಓದಿದರೂ ಪಾಸಾಗಿದ್ದು ಎರಡೇ ಸಬ್ಜೆಕ್ಟ್. ಅಂತಹದ್ದರಲ್ಲಿ ಮೂರು ತಿಂಗಳಲ್ಲಿ ಆರು ಪಾಸ್ ಮಾಡಕ್ಕೆ ನಿನ್ನಿಂದಾಗಲ್ಲ, ಎರಡೆರಡೇ ಕಟ್ಟಿ ಪಾಸು ಮಾಡು' ಎಂದು ಬುದ್ಧಿ ಹೇಳಿದರು. ಪ್ರಬಂಧ, ಚರ್ಚಾಸ್ಪರ್ಧೆಗಳಲ್ಲಿ ಬಹುಮಾನ ತರುತ್ತಿದ್ದ ನನ್ನ ಬಗ್ಗೆ ಅವರಿಗೆ ವಿಪರೀತ ಮಮತೆ, ಆದ್ದರಿಂದ ಬುದ್ಧಿ ಹೇಳಿದ್ದರೆನ್ನಿಸುತ್ತದೆ. ನಾನು ಹಟ ಮಾಡಿ ಆರನ್ನೂ ಕಟ್ಟಿ, ಅವರಿವರಿಂದ ಪಾಠ ಹೇಳಿಸಿಕೊಂಡು ಧೈರ್ಯದಿಂದ ಪರೀಕ್ಷೆ ಬರೆದೆ. ಈ ಸಲ ಫಲಿತಾಂಶ ಬರುವಾಗ ನನ್ನಲ್ಲಿ ಸ್ವಲ್ಪಮಟ್ಟಿನ ಧೈರ್ಯವಿತ್ತು. ಕಷ್ಟಪಟ್ಟು ಕಲಿತದ್ದು ವೇಸ್ಟ್ ಆಗಬಾರದೆಂದು ಕೇಳದಿರುವ ಪ್ರಶ್ನೆಗಳಿಗೂ ಉತ್ತರ ಬರೆದು ಬಂದಿದ್ದೆ! ನನ್ನಂತೆ ಆರೂ ಸಬ್ಜೆಕ್ಟ್ ಕಟ್ಟಿದ್ದ ದೇವರಾಜ ಮತ್ತು ನಾನು ಒಟ್ಟಿಗೇ ರಿಸಲ್ಟ್ ನೋಡಲು ಹೊರಟೆವು. ಶಾಲೆಯ ಮುಖ್ಯದ್ವಾರದಿಂದ ಒಳಹೋಗಲು ದೂರದಿಂದ ಸುತ್ತಿಕೊಂಡು ಬರಬೇಕಾದ್ದರಿಂದ ರಸ್ತೆ ಪಕ್ಕದ ನೆಗೆದು ಹಾರಬಹುದಾಗಿದ್ದ ಪುಟ್ಟ ಕಾಂಪೋಂಡು ಹಾರಿದೆವು. ಅದು ಫಲಿತಾಂಶ ಪ್ರಕಟಿಸಿದ್ದ ಕೋಣೆಗೆ ಹತ್ತಿರವಿತ್ತು. ಆಗೆಲ್ಲಾ ಒಂದು ರೂಮಿನ ಕಿಟಕಿಯಿಂದ ಫಲಿತಾಂಶ ನೋಡಬೇಕಿತ್ತು. ಫೇಲಾದವರು ಅಸಂತೋಷ ವ್ಯಕ್ತಪಡಿಸಲು ರಿಸಲ್ಟ್ ಬೋರ್ಡಿಗೆ ಸಗಣಿ ಎರಚಿ ಹೋಗಿರುತ್ತಿದ್ದ ಉದಾಹರಣೆಗಳೂ ಇದ್ದವು. ಹಾಗಾಗಿ, ಬೇಗ ಫಲಿತಾಂಶ ನೋಡಲು ನಾನು ಮತ್ತು ದೇವರಾಜ ಓಡಿಹೋಗಿ ಕಾಂಪೋಂಡ್ ಹಾರಿದೆವು. ಆಚೆಕಡೆ ಯಾರೋ ಕಿಡಿಗೇಡಿಗಳು ಹೇತಿಟ್ಟು ಹೋಗಿದ್ದರು. ದೇವರಾಜ ಹೋಗಿ ಅದರ ಮೇಲೆ ಬಿದ್ದುದರಿಂದ ಮೈಯೆಲ್ಲಾ ಹೊಲಸಾಯ್ತು. 'ಸತ್ಯ ನನ್ನ ರಿಸಲ್ಟ್ ಇಲ್ಲೇ ಗೊತ್ತಾಗೋಯ್ತು' ಅಂದವನೇ ಮನೆ ಕಡೆ ಓಡಿಬಿಟ್ಟ. ಪುನಃ ಅವನು ಆರೂ ವಿಷಯಗಳಲ್ಲೂ



ಫೇಲಾಗಿದ್ದ. ನಾನು ಕರೆಕ್ಟಾಗಿ ಇನ್ನೂರ ಹತ್ತು ಅಂಕ ಪಡೆದು ಎಲ್ಲದರಲ್ಲೂ ಪಾಸಾಗಿದ್ದೆ!

ಯೋಚಿಸಿ ನೋಡಿ, ಒಂದೇ ಒಂದು ಅಂಕ ಕಡಿಮೆಯಾಗಿ ಇನ್ನೂರ ಒಂಬತ್ತು ಬಂದಿದ್ದರೂ ಆರೂ ಸಬ್ಜೆಕ್ಟ್ ಮತ್ತೆ ಡುಮ್ಕಿ! ಯಾರು ಕರುಣೆಯಿಂದ ಪಾಸ್ ಮಾಡುವ ಔದಾರ್ಯ ಮೆರೆದರೋ!

ಓದಿದರೆ ಪಾಸಾಗಬಹುದೆಂಬ ಭರವಸೆ ನನ್ನೆದೆಯಲ್ಲಿ ಮೊಳೆತದ್ದೇ ಮುಂದೆ ಚೆನ್ನಾಗಿ ಓದಿ, ಬಿ.ಎ. ಪರೀಕ್ಷೆಯಲ್ಲಿ ಐಚ್ಛಿಕ ಕನ್ನಡದಲ್ಲಿ ವಿಶ್ವವಿದ್ಯಾಲಯಕ್ಕೇ ಮೊದಲಿಗನಾಗಿ 'ತೀ. ನಂ.ಶ್ರೀ. ಚಿನ್ನದ ಪದಕ' ಪಡೆದಾಗ, 'ಮಹಾನ್ ವಿದ್ವಾನ್' ಎಂದು ಲೇವಡಿ ಮಾಡುತ್ತಿದ್ದ ಸತ್ಯಣ್ಣ ರೆಡ್ಡಿ ಮೇಷ್ಟ್ರು ಪೇಪರಲ್ಲಿ ಈ ವಿಷಯವನ್ನು ಓದಿ ಸಂತೋಷಪಟ್ಟಿದ್ದಲ್ಲದೆ, ಮನೆಗೆ ಕರೆಸಿ, ತಿಂಡಿ–ಕಾಫಿ ಕೊಟ್ಟು ಪ್ರೀತಿ ತೋರಿದರು. 'ಸಾಧುಸ್ದೆ ಬಿಡು ಮಗೂ' ಎಂದು ಹೇಳಿ ಅವರು ಆಶೀರ್ವದಿಸಿದ್ದು ಮರೆಯಲಾಗಿಲ್ಲ. ಮೊನ್ನೆ ದೇವರಾಜ ಎದುರಿಗೆ ಸಿಕ್ಕಾಗ 'ಬರ್ತೀಯೇನೋ ರಿಸಲ್ಟ್ ನೋಡಕ್ಕೆ' ಅಂತ ಚೇಷ್ಟೆ ಮಾಡಿದೆ. ನಾವು ಫಲಿತಾಂಶ ನೋಡಿದ ದಿನದ ಅನಾಹುತವನ್ನು ನೆನೆದು ಇಬ್ಬರೂ ಹೊಟ್ಟೆತುಂಬಾ ನಕ್ಕೆವು. ಆತ ಮತ್ತೆ ಎಸ್.ಎಸ್. ಎಲ್.ಸಿ. ಕಟ್ಟುವ ಪ್ರಯತ್ನವನ್ನೇ ಮಾಡಲಿಲ್ಲವಂತೆ. ತನ್ನದೇ ಒಂದು ಬದುಕನ್ನು ಕಟ್ಟಿಕೊಂಡು ಸುಖವಾಗಿಯೇ ಇದ್ದಾನೆ.

'ಫೇಲಾದವರಿಗೆ ನಾವಿಲ್ಲವೇ ಮಾದರಿ, ಕೆರೆಗೆ ಬೀಳುವುದು ತರವಲ್ಲ' ಎಂಬ ಕೆ.ಎಸ್. ನರಸಿಂಹಸ್ವಾಮಿಯವರ 'ಹಿಂದಿನ ಸಾಲಿನ ಹುಡುಗರು' ಕವಿತೆಯಲ್ಲಿ ಬರುವ ಸಾಲು ನೆರವಿಗೆ ಬಂದದ್ದು ಅಪ್ಪಿಷ್ಟಲ್ಲ. ಈಗ ಯಾರಾದರೂ ಒಂದು ಸಬ್ಜೆಕ್ಟಲ್ಲಿ ಫೇಲು, ಎರಡು ಫೇಲು ಅಂತ ಹ್ಯಾಪ್ ಮೋರೆ ಹಾಕ್ಕೊಂಡಿದ್ದರೆ, 'ಅಷ್ಟೇತಾನೇ, ನಾನು ನಾಲ್ಕರಲ್ಲಿ ಫೇಲಾಗಿದ್ದೆ' ಎಂದು ಹೇಳಿ, ನಗಿಸಿ ಕಳಿಸುತ್ತೇನೆ.

ರಜೆಯಿರಬೇಕಾದ ದಿನಗಳಲ್ಲಿ ಪರೀಕ್ಷೆಗಳು ನಡೆಯುತ್ತಿದ್ದರೂ ಕೊರೊನಾ ಭಯ ಕಡಿಮೆಯಾಗಿದ್ದರಿಂದ ಮುಂದಿನ ವರ್ಷದಿಂದಲಾದರೂ ಹಿಂದಿನ ವರ್ಷಗಳಂತೆ ದೈನಂದಿನ ಶೈಕ್ಷಣಿಕ ಚಟುವಟಿಕೆಗಳು ಮಾಮೂಲಿಯಾಗಬಹುದೆಂಬ ಆಸೆ ಇದೆ. ಓದಿನಲ್ಲಿರಲಿ, ವಿದ್ಯಾರ್ಥಿಗಳ ನಡವಳಿಕೆಯಲ್ಲೇ ಊಹಿಸಲಾಗದ ಬದಲಾವಣೆಗಳನ್ನು ಕೊರೊನಾ ಬಿಕ್ಕಟ್ಟು ತಂದಿತ್ತಿದೆ. ನಿಧಾನವಾಗಿ ಎಲ್ಲವೂ ಸುಧಾರಿಸಬಹುದು. ಮಕ್ಕಳಲ್ಲಿ, ಅಪ್ಪ–ಅಮ್ಮಂದಿರಲ್ಲಿ, ಶಿಕ್ಷಕರಲ್ಲಿ ಭವಿಷ್ಯದ ಬಗ್ಗೆ ಮೂಡಿದ್ದ ಆತಂಕಗಳನ್ನು ಹೊಸ ಶಿಕ್ಷಣ ಋತುವು ಮರೆಯಾಗಿಸಬಹುದು. ನಮ್ಮ ಋತುಮಾನ ಚಕ್ರ ಹಳೆಯ ದಿನಗಳಿಗೆ ಹೊರ ಪಯಣವನ್ನು ತೋರಿಸಿ, ಹೊಸತನವನ್ನು ಪ್ರಾಪ್ತವಾಗಿಸುವ ಗುಣವುಳ್ಳದಾದ್ದರಿಂದ ನಮ್ಮ ಶಿಕ್ಷಣ ಋತುವಿಗೂ ಆ ಚೈತನ್ಯವನ್ನು ದಯಪಾಲಿಸೀತು ಎಂಬುದೀಗ ನಮ್ಮೆಲ್ಲರ ಭರವಸೆ. ಪಾಸು–ಫೇಲಿಗೆ ಹಿಗ್ಗಿ ಕುಗ್ಗದೆ ನಮಗೆ ಬೇಕಾದಂತಹ ಸಾಮರಸ್ಯದ ಬದುಕನ್ನು ಕಟ್ಟಿಕೊಳ್ಳುವ ಶಕ್ತಿ ಮತ್ತು ವಿವೇಕವನ್ನು ದಯಪಾಲಿಸುವ ಅಕ್ಷರ ದೇವರು ಎಲ್ಲರನ್ನೂ ಕಾಪಾಡಲಿ.

ಪ್ರತಿಕ್ರಿಯಿಸಿ: feedback@sudha.co.in